



ಅರುಣ ಪಿ. ಭಟ್ಟ

# ವಾರ ಭವಿಷ್ಯ: 19.12.2024ರಿಂದ 25.12.2024ರವರೆಗೆ




ಕಾನೂನು ವ್ಯಾಜ್ಯಗಳಿದ್ದಲ್ಲಿ ನಿವಾರಿಸಿಕೊಳ್ಳಲು ಸೂಕ್ತ ವೇದಿಕೆ ದೊರೆಯಲಿದೆ. ಸರ್ಕಾರಿ ಹಾಗೂ ಖಾಸಗಿ ಕೆಲಸ ಕಾರ್ಯಗಳಲ್ಲಿ ಪ್ರಗತಿ ಇದೆ. ಪ್ರೀತಿಪಾತ್ರರ ಜೊತೆಗೆ ಬಾಂಧವ್ಯ ಮತ್ತಷ್ಟು ಗಟ್ಟಿಯಾಗಲಿದೆ. ಸಹೋದ್ಯೋಗಿಗಳೊಂದಿಗೆ ಉತ್ತಮ ಬಾಂಧವ್ಯ ಇರುತ್ತದೆ. ವೈಯಕ್ತಿಕ ಸಂಬಂಧದಲ್ಲಿ ಏರಿಳಿತಗಳಿರುತ್ತವೆ. ಯಾರ ಬಗ್ಗೆಯೂ ಕಟುವಾದ ಶಬ್ದ ಬಳಕೆ ಮಾಡಬೇಡಿ. ಶುಭದಿನ: 23. ಸೌಂದರ್ಯ ಲಹರಿ ಪಠಿಸಿರಿ.

---




ವಾರದ ಶುರುವಿನಲ್ಲಿ ವೈವಾಹಿಕ ಜೀವನ ಸಂತೋಷವಾಗಿರುತ್ತದೆ. ವ್ಯವಹಾರಗಳನ್ನು ಮುನ್ನಡೆಸುವುದರಲ್ಲಿ ಮಹತ್ವದ ಪಾತ್ರವನ್ನು ವಹಿಸಲಿದ್ದೀರಿ. ಪ್ರೀತಿಪಾತ್ರರ ಜೊತೆ ಬಾಂಧವ್ಯ ಗಟ್ಟಿಯಾಗಲಿದೆ. ವಾರದ ಮೊದಲ ಭಾಗದಲ್ಲಿ ಆರೋಗ್ಯ ಉತ್ತಮವಾಗಿರುತ್ತದೆ. ವಾರದ ಮಧ್ಯದಲ್ಲಿ ಸಮಸ್ಯೆ ಎದುರಾಗಬಹುದು. ಈ ಸಮಯದಲ್ಲಿ ಎಚ್ಚರಿಕೆಯಿಂದ ಇರಬೇಕು. ಶುಭದಿನ: 25. ಹನುಮಾನ್ ಚಾಲೀಸ್ ಪಠಿಸಿರಿ.

---




ವೃತ್ತಿರಂಗದಲ್ಲಿ ಹಲವು ಮಹತ್ತರ ಅವಕಾಶಗಳು ದೊರಕುತ್ತವೆ. ವಾರದ ಮೊದಲ ಭಾಗದಲ್ಲಿ ಆದಾಯದಲ್ಲಿ ಏರಿಕೆ ಆಗಲಿದೆ. ವಾರದ ದ್ವಿತೀಯಾರ್ಧದಲ್ಲಿ ಪ್ರೀತಿಪಾತ್ರರ ಜೊತೆಗೆ ಬಾಂಧವ್ಯ ಗಟ್ಟಿಯಾಗಲಿದೆ. ವ್ಯವಹಾರಗಳಲ್ಲಿ ಹೊಸ ಎತ್ತರಕ್ಕೆ ಏರಲಿದ್ದೀರಿ. ಸಣ್ಣ ಪುಟ್ಟ ಆರೋಗ್ಯ ಸಮಸ್ಯೆ ಕಾಣಿಸಿಕೊಳ್ಳಬಹುದು. ವಾರಾಂತ್ಯದಲ್ಲಿ ವೈವಾಹಿಕ ಜೀವನ ಸಂತುಷ್ಟವಾಗಿ ಇರಲಿದೆ. ಶುಭದಿನ: 23. ಚಂಡಿ ಪಾರಾಯಣ ಮಾಡಿರಿ.

---




ವ್ಯಾಪಾರ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುವವರು ಅತ್ಯುತ್ತಮ ಫಲಿತಾಂಶ ಪಡೆಯಲಿದ್ದಾರೆ. ಕಚೇರಿಯಲ್ಲಿ ಬದಲಾವಣೆ ತರುವುದಕ್ಕೆ ಹಣ ಖರ್ಚು ಮಾಡಲಿದ್ದೀರಿ. ಆರೋಗ್ಯ ಮತ್ತು ದೈಹಿಕ ದೃಢತೆ ಚೆನ್ನಾಗಿರಲಿದೆ. ವೃತ್ತಿಪರ ಕೌಶಲವನ್ನು ಹೆಚ್ಚಿಸಿಕೊಳ್ಳಲು ಅವಕಾಶ ದೊರೆಯಲಿದೆ. ಆದರೆ ಅದಕ್ಕೆ ನೀವು ಹೆಚ್ಚಿನ ಶ್ರಮ ಹಾಕಬೇಕಾಗುತ್ತದೆ. ಶುಭದಿನ: 22. ಶ್ರೀರಾಮ ರಕ್ಷಾ ಸ್ತೋತ್ರ ಪಠಿಸಿರಿ.

---




ಹಲವು ಸಕಾರಾತ್ಮಕ ಬದಲಾವಣೆಗೆ ಸಾಕ್ಷಿಯಾಗಲಿದ್ದೀರಿ. ದಾನ ಧರ್ಮ ಕಾರ್ಯಗಳಲ್ಲಿ ಪಾಲ್ಗೊಳ್ಳಲಿದ್ದೀರಿ. ವಾರದ ದ್ವಿತೀಯಾರ್ಧದಲ್ಲಿ ಮನೆಗೆ ಅಗತ್ಯ ಇರುವ ವಸ್ತುಗಳನ್ನು ಖರೀದಿ ಮಾಡುವ ಸಾಧ್ಯತೆಗಳಿವೆ. ಉದ್ಯೋಗಕ್ಕಾಗಿ ಹುಡುಕಾಟ ನಡೆಸುತ್ತಿರುವವರಿಗೆ ಯಶಸ್ಸು ದೊರೆಯಲಿದೆ. ಆದರೆ ಇದಕ್ಕಾಗಿ ಮನಸಾರೆ ಪ್ರಯತ್ನಿಸಬೇಕು. ಶುಭದಿನ 20. ಗಣಪತಿ ಸುಬ್ರಮಣ್ಯ ಜಪ ಮಾಡಿರಿ.

---




ವಾರದ ಶುರುವಿನಿಂದಲೇ ಸಂಬಂಧಿಗಳೊಂದಿಗೆ ಬಾಂಧವ್ಯ ಗಟ್ಟಿಯಾಗಲಿದೆ. ಕುಟುಂಬದಲ್ಲಿ ಸಂತಸದ ವಾತಾವರಣ ಇರಲಿದೆ. ಆರೋಗ್ಯಕ್ಕೆ ಸಂಬಂಧಿಸಿದಂತೆ ಕೆಲ ಸಮಸ್ಯೆ ಕಾಣಿಸಿಕೊಳ್ಳಬಹುದು. ವ್ಯವಹಾರಗಳಲ್ಲಿ ದೊಡ್ಡ ಮಟ್ಟದ ಲಾಭ ದೊರೆಯುವ ಅವಕಾಶಗಳಿವೆ. ಅದೃಷ್ಟದ ಬೆಂಬಲ ಇರುತ್ತದೆ. ದೇವತಾ ಆರಾಧನೆಗಾಗಿ ಸಮಯವನ್ನು ಮೀಸಲಿಡಲಿದ್ದೀರಿ. ಶುಭದಿನ: 24. ದಕ್ಷಿಣಾಮೂರ್ತಿ ಸ್ತೋತ್ರ ಪಠಿಸಿರಿ.

---




ನೀವು ಅಂದುಕೊಂಡ ಗುರಿಯೆಡೆಗೆ ಸಾಗಬಹುದು. ವ್ಯಾಪಾರ– ಉದ್ಯಮ ವಿಸ್ತರಣೆಗೆ ಕೈಗೊಂಡ ಪ್ರಯತ್ನಗಳಲ್ಲಿ ಯಶಸ್ವಿ ಆಗಲಿದ್ದೀರಿ. ಆರೋಗ್ಯ ಉತ್ತಮವಾಗಿರುತ್ತದೆ. ಆರೋಗ್ಯ ಸಮಸ್ಯೆಗಳು ಇದ್ದಲ್ಲಿ ನಿವಾರಣೆ ಆಗಲಿದೆ. ವಾರದ ದ್ವಿತೀಯಾರ್ಧದಲ್ಲಿ ಹಲವು ಕೆಲಸಗಳನ್ನು ಅಂದುಕೊಂಡಂತೆಯೇ ಪೂರ್ಣಗೊಳಿಸಲು ತಂತ್ರಗಳನ್ನು ರೂಪಿಸಲಿದ್ದೀರಿ. ಶುಭದಿನ: 21. ಮಹಾಗಣಪತಿಗೆ ದೂರ್ವಾರ್ಚನೆ ಮಾಡಿರಿ.

---




ವಿದೇಶಗಳಲ್ಲಿ ಕಾರ್ಯ ನಿರ್ವಹಿಸಲು ಬಯಸಿದವರಿಗೆ ಶುಭ ವಾರ್ತೆ. ಹೂಡಿಕೆಗೆ ಉತ್ತಮ ಫಲಿತಾಂಶ ದೊರೆಯಲಿದೆ. ನಿಮ್ಮ ಪ್ರತಿಸ್ಪರ್ಧಿಗಳ ವಿರುದ್ಧ ಕೈ ಮೇಲಾಗಲಿದೆ. ಸಂಗಾತಿಯಿಂದ ನಿರೀಕ್ಷೆ ಮಾಡಿದಂಥ ಬೆಂಬಲ ನಿಮಗೆ ದೊರೆಯುವುದಿಲ್ಲ. ಈ ಸಮಯದಲ್ಲಿ ನಿಮ್ಮಲ್ಲಿ ಸಕಾರಾತ್ಮಕವಾದ ಆಲೋಚನೆ ಮೂಡಲಿದೆ. ಉಡುಗೊರೆ ಪಡೆಯುವ ಯೋಗ ನಿಮಗಿದೆ. ಶುಭದಿನ: 20. ಚಂಡಿ ಪಾರಾಯಣ ಮಾಡಿರಿ.

---




ಕೌಟುಂಬಿಕ ಜೀವನ ಚೆನ್ನಾಗಿ ಇರಬೇಕು ಎಂದು ಹೆಚ್ಚು ಶ್ರಮ ಹಾಕಲಿದ್ದೀರಿ. ಆರ್ಥಿಕ ಸ್ಥಿತಿ ಉತ್ತಮವಾಗಿ ಇರಲಿದೆ. ವ್ಯವಹಾರಗಳು ಇದ್ದಲ್ಲಿ ಏಳ್ಗೆ ಕಾಣಿಸುವ ಸೂಚನೆ ದೊರೆಯುತ್ತದೆ. ಈ ಅವಧಿಯಲ್ಲಿ ಆರೋಗ್ಯ ಸ್ಥಿತಿ ಅಷ್ಟೇನೂ ಉತ್ತಮವಾಗಿ ಇರಲಿಕ್ಕಿಲ್ಲ. ಇತರರ ಮನಸಿಗೆ ಬೇಸರ ಆಗುವಂಥ ಮಾತುಗಳನ್ನು ಆಡಬೇಡಿ. ಸಕಾರಾತ್ಮಕ ಬೆಳವಣಿಗೆಗಳು ಆಗಲಿವೆ. ಶುಭದಿನ 24. ರಾಘವೇಂದ್ರ ಸ್ವಾಮಿಗಳ ಭಜನೆ ಮಾಡಿರಿ.

---




ಹೆಸರು ಗಳಿಸುವುದಕ್ಕೆ ಉತ್ತಮ ಅವಕಾಶಗಳಿವೆ. ಆರೋಗ್ಯವು ಸ್ಥಿರವಾಗಿರುತ್ತದೆ. ಈ ಹಿಂದೆ ಇದ್ದ ಆರೋಗ್ಯ ಸಮಸ್ಯೆಗಳು ನಿವಾರಣೆ ಆಗುತ್ತವೆ. ವಾರದ ದ್ವಿತೀಯಾರ್ಧದಲ್ಲಿ ಆರ್ಥಿಕ ಸ್ಥಿತಿ ಉತ್ತಮವಾಗಿರುತ್ತದೆ. ಜೀವನಶೈಲಿಯಲ್ಲಿ ಸಕಾರಾತ್ಮಕವಾದ ಬದಲಾವಣೆ ಕಾಣಲಿದ್ದೀರಿ. ಸಂಪತ್ತು ಮತ್ತು ಹಣ ಸಂಗ್ರಹಕ್ಕಾಗಿ ನೀವು ಹಾಕಿದ ಪ್ರಯತ್ನ ಫಲಿತಾಂಶ ನೀಡಲು ಆರಂಭಿಸುತ್ತದೆ. ಶುಭದಿನ: 22. ಕಾಲಭೈರವನ ಸೇವೆ ಮಾಡಿರಿ.

---




ಈ ವಾರ ಒಂದಿಲ್ಲೊಂದು ಕ್ರಿಯೇಟಿವ್ ಕೆಲಸದಲ್ಲಿ ತೊಡಗಿಕೊಳ್ಳಲಿದ್ದೀರಿ. ಖ್ಯಾತನಾಮರನ್ನು ಭೇಟಿ ಆಗುವ ಸಾಧ್ಯತೆ ಇದೆ. ಧಾರ್ಮಿಕ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲಿದ್ದೀರಿ. ನಿಮ್ಮ ಜ್ಞಾನವನ್ನು ಹೆಚ್ಚಿಸಿಕೊಳ್ಳಲು ಯತ್ನಿಸಲಿದ್ದೀರಿ. ವಾರದ ದ್ವಿತೀಯಾರ್ಧದಲ್ಲಿ ವೃತ್ತಿ ಬದುಕಿನಲ್ಲಿ ಸಕಾರಾತ್ಮಕ ಬದಲಾವಣೆ ಮಾಡಿಕೊಳ್ಳಲಿದ್ದೀರಿ. ಶುಭದಿನ 21. ವಿಷ್ಣು ಸಹಸ್ರನಾಮ ಓದಿರಿ.

---




ವಾರದ ಶುರುವಿನಿಂದಲೇ ಅಂದುಕೊಂಡ ಫಲಿತಾಂಶ ನಿಮಗೆ ದೊರೆಯಲಿದೆ. ಶುಭ ವಾರ್ತೆ ಕೇಳಲಿದ್ದೀರಿ. ಹಣಕಾಸು ಹೂಡಿಕೆಯಿಂದ ಉತ್ತಮ ಲಾಭವಾಗಲಿದೆ. ವಾರದ ದ್ವಿತೀಯಾರ್ಧದಲ್ಲಿ ಅದೃಷ್ಟದ ಬಲ ನಿಮಗಿರುತ್ತದೆ. ಸಕಾರಾತ್ಮಕ ಫಲಿತಾಂಶವನ್ನು ನಿರೀಕ್ಷೆ ಮಾಡಬಹುದು. ವೃತ್ತಿ ಬದುಕನ್ನು ಆರಂಭ ಮಾಡಬೇಕಿರುವವರಿಗೆ ಉತ್ತಮ ಅವಕಾಶ ದೊರೆಯಲಿದೆ. ಶುಭದಿನ 23. ಶಿವಕವಚ ಪಠಿಸಿರಿ.